ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ,
ಚನ್ನರಾಯಪಟ್ಟಣ

ಸಿ ಸಿ ನಂಃ 50/2024

ಚಾಸಾಃ 1ಪ್ರಾಸಾಃ 1

| | | |
|---|---|---|
| ಸಾಕ್ಷಿಯ ಹೆಸರು | : | ಸಂತೋಷಿ ಲಕ್ಷ್ಮಿ |
| ಗಂಡನ ಹೆಸರು | : | ರಾಜೇಶ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ಇಲ್ಲ |
| ವಾಸಸ್ಥಳ | : | ಹರಿದ್ವಾರ |

ದಿನಾಂಕ **15.06.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ

ಚಾಸಾ 2 ನನ್ನ ದೊಡ್ಡಮ್ಮ, ಚಾಸಾ 3 ನನ್ನ ತಮ್ಮ, ಚಾಸಾ 4 ರಿಂದ 6 ರವರ ಪರಿಚಯ ಇದೆ. 1ನೇ ಆರೋಪಿ ನನ್ನ ಗಂಡ, 2ನೇ ಆರೋಪಿ ನನ್ನ ಅತ್ತೆ. ನನ್ನ ಮತ್ತು 1ನೇ ಆರೋಪಿಯ ನಡುವೆ ದಿಃ 01.10.2011 ರಂದು ಮದುವೆ ಆಗಿರುತ್ತದೆ. ಮದುವೆ ಆದ ನಂತರ ನಾನು ನನ್ನ ಗಂಡನ ಮನೆಯಲ್ಲಿ ವಾಸವಾಗಿರುತ್ತೇನೆ. ಆರೋಪಿಗಳು ನನ್ನನ್ನು ಚೆನ್ನಾಗಿ ನೋಡಿಕೊಂಡಿರುತ್ತಾರೆ. ಆರೋಪಿಗಳು ನನಗೆ ಯಾವುದೇ ದೈಹಿಕ ಮತುತ ಮಾನಸಿಕ ಹಿಂಸೆಯನ್ನು ನೀಡಿಲ್ಲ, ಹಲ್ಲೆ ಮಾಡಿಲ್ಲ, ಯಾವುದೇ ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿ ನನಗೆ ಯಾವುದೇ ನಷ್ಟ ಉಂಟು ಮಾಡಿಲ್ಲ. ನಾನು ಪೋಲಿಸರಿಗೆ ಈ ಬಗ್ಗೆ ಯಾವುದೇ ದೂರನ್ನು ನೀಡಿಲ್ಲ, ನನಗೂ ಆರೋಪಿಗಳಿಗೂ ಗಲಾಟೆ ಆಯಿತು ಎಂದು ನಾನು ಪೋಲಿಸರಿಗೆ ಹೇಳಿಕೆ ಮತ್ತು ಮರು ಹೇಳಿಕೆ ನೀಡಿಲ್ಲ, ನನ್ನ ಸಮಕ್ಷಮ ಪೋಲಿಸರು ಯಾವುದೇ ಪಂಚನಾಮೆ ಮಾಡಿಲ್ಲ. ಪೋಲಿಸ್ ಠಾಣೆಯಲ್ಲಿ ನಾನು ಎರಡು ದಾಖಲೆಗಳಿಗೆ ಸಹಿ ಮಾಡಿರುತ್ತೇನೆ. ಅವುಗಳಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಸಾಕ್ಷಿಯು ಗುರುತಿಸಿದ ಎರಡು ದಾಖಲೆಗಳನ್ನು ನಿಪಿ 1 ಮತ್ತು 2 ಎಂದು ಗುರುತಿಸಲಾಯಿತು. ಸಾಕ್ಷಿಯ ನಿಪಿ 1 ಎ ಹಾಗೂ 2ಎ ಎಂದು ಗುರುತಿಸಲಾಯಿತು. ನಿಪಿ 1 ಮತ್ತು 2 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ದಾಖಲೆಗಳನ್ನು ಪರಿಗಣಿಸಿ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಿದೆ)**

ಪಾಟೀಸವಾಲುಃ ಮಾನ್ಯ ಎ ಪಿ ಪಿ ರವರಿಂದಃ

ದಿಃ 09.07.2023 ರಂದು ಆರೋಪಿಗಳು ನನ್ನೊಂದಿಗೆ ಜಗಳ ತೆಗೆದು ರಾತ್ರಿ 9.30 ರ ಸಮಯದಲ್ಲಿ .................. ನನ್ನ ಅತ್ತೆ ಮತ್ತು ಗಂಡನ ವಿರುದ್ಧ ಕ್ರಮ ಕೈಗೊಳ್ಳಿ ಎಂದು ನಿಪಿ 1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 17.07.2023 ರಂದು ನಾನು ಪೋಲಿಸರಿಗೆ ಯಾವುದೇ ಮಹಜರ್ ಸ್ಥಳ ತೋರಿಸಿರುವುದಿಲ್ಲ. ನನ್ನ ಮತ್ತು ಚಾಸಾ 6 ರವರ ಸಮಕ್ಷಮ ಸಂಜೆ 4 ರಿಂದ 5 ಗಂಟೆಯವರೆಗೆ ನಿಪಿ 2ರಂತೆ ಮಹಜರ್ ಕ್ರಮ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 17.07.2023 ರಂದು ಸಾಕ್ಷಿಯ ಪೋಲಿಸರ ಮುಂದೆ ಮರು ಹೇಳಿಕೆ ಯನ್ನು ಓದಿ ಹೇಳಲಾಗಿದ್ದು ಸಾಕ್ಷಿಯು ಅದನ್ನು ನಿರಾಕರಿಸಿದ್ದು ಅದನ್ನು ನಿಪಿ 3 ಎಂದು ಗುರುತಿಸಲಾಯಿತು. ನಾವು ಮತ್ತು ಆರೋಪಿಗಳು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ . ರಾಜಿ ಮಾಡಿಕೊಂಡ ಕಾರಣ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲು ಆರೋಪಿತರ ಪರ ಶ್ರೀ ವಕೀಲರಿಂದಃ

ಇರುವುದಿಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.